ಅ) ಪ್ರಶ್ನೆ ಪತ್ರಿಕೆಗಳು, ಪರೀಕ್ಷೆಯು ಪ್ರಾರಂಭವಾಗುವುದಕ್ಕಿಂತ ಮುಂಚೆ ಪ್ರತಿ ವರ್ಷ ಬಯಲಾಗಿರುವುದು ಹಾಗೂ ಇದು ಒಂದು ಕ್ರಮಬದ್ಧ ಘಟನೆಯಾಗಿರುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಪ್ರಶ್ನೆ ಪತ್ರಿಕೆಗಳು ಈ ರೀತಿ ಬಯಲಾಗುತ್ತಿರುವ ಕುರಿತು ಈ ವರೆಗೆ ಸರಕಾರವು ಕ್ರಮ ತೆಗೆದುಕೊಂಡಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಲ್ಲಿ ನಾವು ಕೇಳಿದ ಪ್ರಶ್ನೆ ಬಿಟ್ಟು ಬೇರೆ ಉತ್ತರ ಕಳುಹಿಸಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೇನೆ.

ಉಪಾಧ್ಯಕ್ಷರು : ಈಗ ವರದಿಯನ್ನು ಒಪ್ಪಿಸುವುದಿದೆ.

ವರದಿಯನ್ನೊಪ್ಪಿಸುವುದು

ಶ್ರೀ ಜಿ.ಎಸ್. ಶಿವನಂಜಪ್ಪ : (ಅಧ್ಯಕ್ಷರು, ಅಧೀನ ಶಾಸನ ರಚನಾ ಸಮಿತಿ): ಮಾನ್ಯ ಉಪಾಧ್ಯಕ್ಷರೆ, ಅಧೀನ ಶಾಸನ ರಚನಾ ಸಮಿತಿಯ 15ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವರದಿಯನ್ನು ಒಪ್ಪಿಸಲಾಯಿತು.

ನಿಲುವಳಿ ಸೂಚನೆ

ಗ್ರಾಮ ಸಹಾಯಕರು ಉಪವಾಸ ಸತ್ಯಾಗ್ರಹ ಮಾಡುತ್ತಿರುವುದು.

+ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಒಂದು ನಿಲುವಳಿ ಸೂಚನೆ ಕಳುಹಿಸಿದ್ದೆ. ಅದು ಈ ಸ್ಥಿತಿಗೆ ಬರಬಾರದಾಗಿತ್ತು. ಕಳೆದ ಮೂರು ದಿವಸಗಳಿಂದ ಕರ್ನಾಟಕ ರಾಜ್ಯದ ಗ್ರಾಮ ಸಹಾಯಕರ ಸಂಘದವರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತೂ ಒಂದು ಟೆಲಿಗ್ರಾಂ ಕಳುಹಿಸಿದ್ದಾರೆ. ಕಂದಾಯ ಮಂತ್ರಿಗಳಿಗೆ ಇದು ಸಂಬಂಧಪಟ್ಟಿದೆ. ಇವರ ಬೇಡಿಕೆಗಳು ಹಲವಾರು ಇವೆ. ಮುಖ್ಯವಾಗಿ ನನಗೆ ಒಂದು ಟೆಲಿಗ್ರಾಂ ಕಳುಹಿಸಿದ್ದಾರೆ. ಅದರಲ್ಲಿ 15 ಜನರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಅವರಿಗೆ ಕುಡಿಯುವುದಕ್ಕೆ ನೀರಿಲ್ಲ, ಸರ್ಕಾರದಿಂದ ಅವರಿಗೆ ರೆಸ್ಪಾನ್ಸ್ ಇಲ್ಲ, ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಂಡು ಪ್ರಸ್ತಾಪ ಮಾಡಿ ಸಮಸ್ಯೆ ಬಗೆಹರಿಸಿ ಎಂದು ಬಹಳ ನೊಂದುಕೊಂಡು ನನಗೆ ಬರೆದಿದ್ದಾರೆ.

(ಸದನದಲ್ಲಿ ವಿದ್ಯುಚ್ಛಕ್ತಿ ಸ್ಥಗಿತವಾಯಿತು)

ಶ್ರೀ ವಾಟಾಳ್ ನಾಗರಾಜ್ : ಇಡೀ ರಾಜ್ಯಕ್ಕೆ ವಿದ್ಯುಚ್ಛಕ್ತಿ ಮಂಡಳಿ ಕೊಡುತ್ತಿರುವ ಕೊಡುಗೆ ಇದು. ವಿದ್ಯುಚ್ಛಕ್ತಿ ರಾಜ್ಯಕ್ಕೂ ಇಲ್ಲ, ಶಾಸನಸಭೆಗೂ ಇಲ್ಲ. ಈ ಪರಿಸ್ಥಿತಿಯಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆದ್ದರಿಂದ ಈ ಬಗ್ಗೆ...

ಉಪಾಧ್ಯಕ್ಷರು : ನಿಲುವಳಿ ಸೂಚನೆ ಕಳುಹಿಸಿದ್ದೀರಿ. ನಾಳೆ ದಿವಸ ಇದನ್ನು ಕಾಲಿಂಗ್ ಅಟೆನ್‌ಷನ್ ಆಗಿ ತೆಗೆದುಕೊಳ್ಳೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ಮಂತ್ರಿಗಳು ಉತ್ತರ ಹೇಳಿದರೆ ಅದಕ್ಕಾಗಿ ಕಾಲಿಂಗ್ ಅಟೆನ್‌ಷನ್ ಮಾಡುವ ಪ್ರಸಂಗ ಬರುವುದಿಲ್ಲ. ಕನಿಷ್ಟ ಹೋಗಿ ಅವರ ಜೊತೆ ಮಾತನಾಡುವ ಸೌಜನ್ಯ ಕೂಡ ತೋರಿಸದೇ ಇದ್ದರೆ ಹೇಗೆ? ಅವರು ವಿಧಾನಸೌಧದ ಮುಂದೆ ಉಪವಾಸ ಕುಳಿತಿದ್ದಾರೆ. ಶಾಸನಸಭೆ ನಡೆಯುತ್ತಿದೆ. ಯಾರನ್ನಾದರೂ ಕಳುಹಿಸಿ ಆಶ್ವಾಸನೆ ಕೊಟ್ಟರೆ ಸದನದ ಸಮಯ ಉಳಿಸಬಹುದು. ಇಲ್ಲದಿದ್ದರೆ ನಿಲುವಳಿ ಸೂಚನೆ ಪ್ರಾರಂಭ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಗ್ರಾಮ ಸಹಾಯಕರು ಏನಿದ್ದಾರೆ ಅವರು ನನ್ನನ್ನು ಕಂಡಿದ್ದರು. ಸುಮಾರು 5 ಜನ ರೆಪ್ರಸೆಂಟೇಟೀವ್ಸ್ ನಿನ್ನೆ ಬಂದು ನನ್ನನ್ನು ನೋಡಿದ್ದಾರೆ. ನಾನು ಅವರನ್ನು ಕೂರಿಸಿಕೊಂಡು ಎಲ್ಲಾ ಕಾರ್ಯದರ್ಶಿಗಳನ್ನು ಕರೆಯಿಸಿ ಮಾತನಾಡಿ ಅವರ 5 ಬೇಡಿಕೆಗಳಲ್ಲಿ ಮೊದಲನೇ ಬೇಡಿಕೆ 'ಡಿ' ದರ್ಜೆ ನೌಕರರು ಎಂದು ಕನ್‌ವರ್ಟ್ ಮಾಡುವುದು ಇದೆ. ಅದು ಪೇಕಮಿಷನ್ ಮುಂದೆ ಇದೆ. ಪೇ ಕಮಿಷನ್ ರಿಪೋರ್ಟ್ ಪ್ರಕಾರ ಯಾವ ಯಾವ ಅನಾಮಲೀಸ್ ಇದೆ, ಅದನ್ನು ಅಕ್ಸೆಪ್ಟ್ ಮಾಡಿದಾಗ ಮಾತ್ರ ಇದು ಅನ್ವಯಿಸುತ್ತದೆ. ಅದರ ಆಧಾರದ ಮೇಲೆ ಉಳಿದ ಎರಡು ಬೇಡಿಕೆಗಳು ನಿಂತಿವೆ. ಮೊದಲೇ ಬೇಡಿಕೆಯನ್ನು ಪೇ ಕಮಿಷನವರು ಒಪ್ಪಿಕೊಂಡರೆ ಇನ್ನು ಎರಡು ಬೇಡಿಕೆಗಳನ್ನೂ ಮುಂದೆ ಒಪ್ಪಬಹುದು. ಅವರಿಗೆ ತಹಸೀಲ್ದಾರರು ತೊಂದರೆ ಕೊಡುತ್ತಿದ್ದಾರೆ, ಯಾವಾಗ ಬೇಕೋ ಆಗ ಡ್ಯೂಟಿಗೆ ಕರೆಯುತ್ತಾರೆ, ಅದಕ್ಕೆ ಸರ್ಕ್ಯುಲರ್ ಹೊರಡಿಸಬೇಕು ಎಂದು ಹೇಳಿದ್ದಾರೆ. ರೂಲ್ಸ್ ಪ್ರಕಾರ ಅವರಿಂದ ಏನು ಕೆಲಸ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಬೇಕು, ಪರ್ಸನಲ್ ಯೂಸ್‌ಗೆ ಉಪಯೋಗ ಮಾಡಿಕೊಳ್ಳಬಾರದು ಎಂಬುದನ್ನು ಈಗಾಗಲೇ ಒಪ್ಪಿದ್ದೇವೆ. ಅದರ ಬಗ್ಗೆ ಸರ್ಕ್ಯುಲರ್ ಕಳುಹಿಸುತ್ತೇವೆ. ಮತ್ತು ಯಾರು ಕೆಲಸದಲ್ಲಿದ್ದಾಗ ಸತ್ತುಹೋಗುತ್ತಾರೆ, ಅವರ ಮಕ್ಕಳಿಗೆ ಕೆಲಸ ಕೊಡತಕ್ಕದ್ದು ಅಥವಾ ಅವರು ಟೈರ್ ಆಡಮೇಲೆ ಅವರ ಮಕ್ಕಳನ್ನು ನೇಮಕ ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಏಕೆಂದರೆ 'ಡಿ' ಕ್ಲಾಸ್ ಸರ್ವೆಂಟ್ಸ್ ಎಂದರೆ ಯಾವ ರೀತಿ ಗೌರ್ನಮೆಂಟ್ ಸರ್ವೆಂಟ್ಸ್‌ಗೆ ಸೌಲಭ್ಯ ಸಿಗುತ್ತದೋ ಅದು ಸಿಗುತ್ತದೆ. ಆಕಸ್ಮಿಕವಾಗಿ ಕೆಲಸದಲ್ಲಿದ್ದಾಗ ಮರಣ ಹೊಂದಿದರೆ ಅಂಥವರಿಗೆ ಕೊಡಬೇಕೆಂದು ಡೆಪ್ಯೂಟಿ ಕಮಿಷನರ್‌ಗೆ ಸರ್ಕ್ಯುಲರ್ ಕಳುಹಿಸುತ್ತೇವೆ ಎಂದು ಹೇಳಿದ್ದೇನೆ. ಈಗಾಗಲೇ ಅವರ ಜೊತೆ ಮಾತುಕತೆ ಆಡಿದ್ದೇನೆ. ಅವರನ್ನು ಯಾರೂ ಕೇಳಲಿಲ್ಲ, ಯಾರೂ ಮಾತನಾಡಲಿಲ್ಲ ಎಂದು ತಮಗೆ ತಪ್ಪು ತಿಳಿವಳಿಕೆ ಕೊಟ್ಟಿರಬಹುದು. ನಿನ್ನೆ 6 ಗಂಟೆಯಲ್ಲಿ ಕರೆದು ಸುಮಾರು ಒಂದು ತಾಸು ಚರ್ಚೆ ಮಾಡಿ, ಡೆಪ್ಯುಟಿ ಸೆಕ್ರೆಟರಿ, ಸಮ್ಮುಖದಲ್ಲಿ ಯಾವುದು ಒಪ್ಪಬಹುದು, ಯಾವುದು ಸಾಧ್ಯವಿಲ್ಲ, ಎಂಬುದನ್ನು ಈಗಾಗಲೇ ತಿಳಿಸಿದ್ದೇನೆ. ಮೊದಲು 300 ರೂಪಾಯಿ ಇದ್ದುದನ್ನು ನಾನು ಬಂದಮೇಲೆ 500 ರೂಪಾಯಿ ಮಾಡಿದ್ದೇನೆ. 6 ವರ್ಷದಲ್ಲಿ ಸಡೆನ್ನಾಗಿ 200 ರೂಪಾಯಿಗಳ ಜಂಪ್ ಕೊಟ್ಟಿದ್ದೇನೆ. ಇಂತಹ ಸ್ಥಿತಿಯಲ್ಲಿ ಬಹುಶಃ ಇದಕ್ಕಿಂತಲೂ ಹೆಚ್ಚು ಯಾರು ಮಾಡುವುದಕ್ಕೆ ಆಗುತ್ತಾ ಇರಲಿಲ್ಲ ಎಂದು ನನ್ನ ಅನಿಸಿಕೆ. ಇದಕ್ಕಿಂತ ಜಾಸ್ತಿ ಮಾಡಬೇಕೆಂದರೆ ಹಣಕಾಸನ್ನೂ ನೋಡಬೇಕಾಗುತ್ತದೆ. ಇವರು ಸುಮಾರು 10 ಸಾವಿರ ಜನ ಇದ್ದಾರೆ. ಈ 10 ಸಾವಿರ ಜನರನ್ನು 'ಡಿ' ಗುಂಪಿನ ನೌಕರರು ಎಂದು ಪರಿಗಣಿಸಿದರೆ ಕೋಟ್ಯಾಂತರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಈ ಸಮಸ್ಯೆ ಪೇ ಕಮೀಷನ್ ಮುಂದೆ ಇರುವುದರಿಂದ ಇದರ ಬಗ್ಗೆ ನಾನು ಏನೂ ನಿರ್ಣಯ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಉಳಿದ ಡಿಮಾಂಡ್ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ಅವರಿಗೆ ಹೇಳಿದ್ದೇನೆ. ಅವರು ನಿನ್ನೆ ಸಾಯಂಕಾಲ ನನ್ನ ಹತ್ತಿರ ಬಂದು ಕುಳಿತು

ಮಾತನಾಡಿ, ಒಪ್ಪಿಕೊಂಡು ಹೋಗಿದ್ದಾರೆ. ಬಹುಶಃ ಅವರು ಸಮಾಧಾನ ಆಗಿ ಹೋಗಿರಬಹುದು ಎಂದು ನನ್ನ ಅನಿಸಿಕೆ ಆದ್ದರಿಂದ ಈ ಬಗ್ಗೆ ನಿಲುವಳಿ ಸೂಚನೆ ಬೇಕಾಗಿಲ್ಲ ಎಂದು ಹೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಉಳಿದ ಬೇಡಿಕೆಗಳ ಬಗ್ಗೆ ಚರ್ಚೆ ಮಾಡುತ್ತೇವೆ, ಮುಷ್ಕರ ನಿಲ್ಲಿಸಿ ಎಂದು ತಾವು ಒಂದು ಮಾತು ಹೇಳಿಬಿಡಿ. ನಾನು ತಮ್ಮ ವತಿಯಿಂದ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಎಲ್ಲಾ ನಿನ್ನೆ ಮಾತನಾಡಿದ್ದೇನೆ.

ಕನಕಪುರ ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ನೊಂದವರಿಗೆ ಪರಿಹಾರ ಕೊಡುವ ಬಗ್ಗೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಉಪಾಧ್ಯಕ್ಷರೆ, ಒಂದು ವಿಷಯವನ್ನು ನಾನು ಅರಣ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಕನಕಪುರ ತಾಲ್ಲೂಕಿನ ಗ್ರಾಮಗಳಿಗೆ ನಿನ್ನೆ ದಿವಸ ಮಧ್ಯಾಹ್ನ ನೂರಾರು ಆನೆಗಳ ಹಿಂಡು ನುಗ್ಗಿವೆ. ವಿಧಾನಸೌಧದಿಂದ ಸುಮಾರು 21 ಕಿ.ಮೀ. ದೂರದಲ್ಲಿ ಕಗ್ಗಲಳ್ಳಿ ಎಂಬಲ್ಲಿ, ಸ್ಟೇಟ್ ಹೈವೇನಲ್ಲಿ ನೂರಾರು ಆನೆಗಳು ಬಂದು ರಸ್ತೆ ಬ್ಲಾಕ್ ಮಾಡಿ ಹಳ್ಳಿಯ ಇಬ್ಬರನ್ನು ಸಾಯಿಸಿದೆ. ಆನೆಗಳ ಹಾವಳಿಯಿಂದ ಹಲವಾರು ಜನರಿಗೆ ಗಾಯಗಳಾಗಿವೆ. ಇಲ್ಲಿಯವರೆಗೆ ಬೆಳಗಿನ ಹೊತ್ತು ಅಥವಾ ಸಂಜೆಯ ಹೊತ್ತು ಆನೆಗಳು ಬರುತ್ತಿದ್ದುವು. ಈಗ ಹಾಡಹಗಲಲ್ಲೇ ಬರುವುದಕ್ಕೆ ಶುರುವಾಗಿದೆ. ಇದಕ್ಕೆ ಮುಖ್ಯವಾದ ಕಾರಣ ಏನೆಂದರೆ, ನ್ಯಾಷನಲ್ ಪಾರ್ಕ್‌ನಲ್ಲಿ ನೂರಾರು ಆನೆಗಳು ಇವೆ. ಅಲ್ಲಿ ನೀರು ಸಿಗದ ಕಾರಣ ಅಥವಾ ಬೇರೆ ಕಾರಣಗಳಿಂದ ನಮ್ಮ ತಾಲ್ಲೂಕಿನ ಕಗ್ಗಲಳ್ಳಿ, ಗಬಾಡಿ ಮುಂತಾದ ಗ್ರಾಮಗಳಿಗೆ ಆನೆಗಳು ನುಗ್ಗಿದ್ದು ಅಲ್ಲಿನ ನೂರಾರು ಜನರು ಭಯಭೀತರಾಗಿದ್ದಾರೆ. ಯಾರು ನಿನ್ನೆ ಮಧ್ಯಾಹ್ನ ಇಬ್ಬರು ಸತ್ತಿದ್ದಾರೆ ಅವರ ಕುಟುಂಬವರ್ಗದವರಿಗೆ ದಯಮಾಡಿ ತಕ್ಷಣ ಪರಿಹಾರವನ್ನು ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಯಾರಿಗೆ ಗಾಯವಾಗಿದೆ ಅವರಿಗೆ ಸ್ವಲ್ಪವಾದರೂ ಪರಿಹಾರ ಕೊಡಬೇಕು. ತೀರ ಬಡವರು, ಕೂಲಿನಾಲಿ ಮಾಡುವವರು, ಗುಡಿಸಿಲಿನಲ್ಲಿರುವವರಿಗೆ ತೊಂದರೆಯಾಗಿದೆ. ಇವರಿಗೆ ಪರಿಹಾರ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತೆ ಈಗಲೂ ಆನೆಗಳು ಅಲ್ಲೇ ಇವೆ. ಆದ್ದರಿಂದ ತಕ್ಷಣ ಕನ್ಸರ್‌ವೇಟರ್ ಲೆವೆಲ್‌ನ ಅಧಿಕಾರಿಗಳನ್ನು ಅಲ್ಲಿಗೆ ಕಳುಹಿಸಿ ಮುಂದೆ ಆನೆಗಳ ಹಾವಳಿ ಆಗದಂತೆ ವ್ಯವಸ್ಥೆ ಮಾಡತಕ್ಕಂಥ ಭರವಸೆಯನ್ನು ಕೊಡಬೇಕು. ತಾವು ಆ ಕೆಲಸಮಾಡಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಕಾಡುಗಳಿಗೆ ಬೆಂಕಿ ಬಿದ್ದು ಆನೆಗಳು ಬೇರೆ ಬೇರೆ ಕಡೆ ನುಗ್ಗುತ್ತಿವೆ. ಹೀಗೆ ಬೆಂಕಿ ಮುಂದುವರಿದರೆ ಸ್ವಲ್ಪ ದಿವಸದಲ್ಲಿ ಆನೆಗಳು ಬೆಂಗಳೂರಿಗೂ ನುಗ್ಗುತ್ತವೆ. ಕಾರಣ ಏನೆಂದರೆ, ಈಗ ಆನೆಗಳು ಬೆಂಗಳೂರಿನಿಂದ ಕೇವಲ 20 ಕಿ.ದೂರದಲ್ಲಿ ಹಿಂಡು ಹಿಂಡಾಗಿ ಬಂದು ಹಾವಳಿ ನಡೆಸುತ್ತಿವೆ. ಆದ್ದರಿಂದ ಈ ಬಗ್ಗೆ ಸರ್ಕಾರ ಕೂಡಲೇ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಗುರುದೇವ್ : ಮಾನ್ಯ ಅಧ್ಯಕ್ಷರೇ, 6.1.78 ರಲ್ಲಿ ಆಲೂರು ತಾಲ್ಲೂಕು, ಕುಂದೂರು ಹೊಬಳಿಯಲ್ಲಿ ಒಬ್ಬರಿಗೆ ಕಾಡಾನೆ ತುಳಿದಿದ್ದರಿಂದ ಆತ ಮರಣ ಹೊಂದಿದ. ಈ ಬಗ್ಗೆ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಹಾರ ಕೊಡುವ ಬಗ್ಗೆ ಆದೇಶ ಕೊಟ್ಟಿದ್ದರೂ ಕೂಡಾ ಇನ್ನೂವರೆಗೆ ಆತನ ಕುಟುಂಬವರ್ಗದವರಿಗೆ ಪರಿಹಾರ ಸಿಕ್ಕಿರುವುದಿಲ್ಲ. ಕಾಡಾನೆ ಹಾವಳಿ ನಮ್ಮಲ್ಲೂ ಕೂಡಾ ಜಾಸ್ತಿಯಾಗಿದೆ.